84

ಸಂ 1904ನೆ ಇಸವಿ ಮೇ 31ನೆ ಮಂಗಳವಾರ ಚಿಕ್ಕಮಗಳೂರಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡು ನಡವಳಿಕೆಗಳು—

ಮೆ|| ಎಂ. ನಾರಾಯಣರಾಯರವರು, (ಪ್ರೆಸಿಡೆಂಟ್)

ಉದ್ಯೋಗಪ್ರಯುಕ್ತವಾದ ಮೆಂಬರುಗಳು.

ಹಾಜರು.

1. ಮೆ|| ಹೆಚ್. ಜೆ. ಸೋಜಾಯುನವರು, ವೈಸ್ ಪ್ರೆಸಿಡೆಂಟ್.
2. ,, ಎಚ್. ಜೆ. ಹೊಲ್ಲಾಯಿ ಸಾಹೇಬರವರು, ಎಗ್ಸಿಕ್ಯೂಟಿವ್ ಇಂಜನಿಯರ್.
3. ,, ಎ. ವೇದಾಂತಪೇಠಿಗವೈಯ್ಯಂಗಾರ್ಯವರು, ಟ್ರೈಜರಿ ಅಸಿಸ್ಟೆಂಟ್ ಕಮಿಷನರವರು.
4. ,, ಎಮ್. ಕೆ. ತಿರುವಲಾಚಾರ್ಯರು, ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು.

ಗೈರ್ ಹಾಜರು.

1. ಮೆ|| ಸಿ. ಎ. ನಂಜಪ್ಪನವರು, ಡಿಸ್ಟ್ರಿಕ್ಟ್ ಸರ್ಜ್ಜನ್. (ಕಾಹಿಲೆ)
2. ,, 2ನೆ ಅಸಿಸ್ಟೆಂಟ್ ಕಮ್ಮಿಷನರವರು, (ಸ್ಥಳ ಖಾಲಿ)

ಇತರ ಮೆಂಬರುಗಳು.

1. ಮೆ|| ತಂಗ್ಲಿ ನರಸುಂಹೈಯ್ಯಂಗಾರ್ಯವರು.
2. ,, ಎಸ್ ಪರ್ವತಪ್ಪನವರು.
3. ,, ಮಾಗಳದ ರಾಮಚಂದ್ರರಾಯರವರು.
4. ,, ಬಿ ಗುಂಡಪ್ಪನವರು.
5. ,, ಸಿ. ಶ್ರೀನಿವಾಸರಾವ್‌ರವರು.
6. ಮೆ|| ಕುಪ್ಪಸಾಮಿಪಿಳ್ಳೆಯವರು.
7. ,, ಶ್ರೀಕಂಠಶಾಸ್ತ್ರಿಯವರು.
8. ,, ಎಂ. ಗಣೇಶರಾಯರವರು.
9. ,, ನಂದಿ ಅಬ್ದುಲ್‌ಖಾದರ್ ಸಾಹೇಬರವರು.
10. ,, ಎಚ್. ಪಿಲ್‌ಕಿಂಗ್‌ಟನ್ ಸಾಹೇಬರವರು.

1. ಮೆ|| ಸಿ. ಎಚ್. ಗಾಡ್‌ಫ್ರೀ ಸಾಹೇಬರವರು (1904ನೆ ಅಕ್ಟೋಬರು ತಿಂಗಳ ವರಗೆ ನಡಿಯತಕ್ಕ ವಿಷಯಗಳಿಗೆ ಹಾಜರಾಗಲು ತಾವು ಇಂಗ್ಲೆಂಡಿಗೆ ಹೋಗುವ ಸಬಬು ಅವಕಾಶವಾಗುವದಿಲ್ಲವೆಂತ ಬರದ ರಿಪೋರ್ಟು ತಲಪಿರುತ್ತ.)

2. ಮೆ|| ಜುವಳಿ ಗಣೇಶರಾಯರು, (ಖಾಯಿಲೆಯಿಂತ ಬರದ ರಿಪೋರ್ಟು ತಲಪಿರುತ್ತೆ).

3. ,, ಚನ್ನಕೇಶವರಾಯರವರು, (ಸ್ವಂತ ಕೆಲಸದ ದೆಸೆಯಿಂದ ಹಾಜರಾಗಲು ಆಗುವದಿಲ್ಲವೆಂತ ಬರದ ರಿಪೋರ್ಟು ತಲಪಿರುತ್ತೆ).

4. ಮೆ|| ಚಂದ್ರೆಗವೌಡರು, (ಮಂಗಳೂರಿಗೆ ಹೋಗಿರುತ್ತಾರೆ).

5. ,, ದ.ವುನಿ ಸಾಹೇಬರವರು, (ಖಾಯಿಲೆಯಿಂತ ಬರದ ರಿಪೋರ್ಟು ತಲಪಿರುತ್ತೆ).

6. ,, ಪಟ್ಟಣಗೆರೆ ರಂಗಣ್ಣನವರು.

7. ,, ಶಾಂತಪ್ಪಚೆಟ್ಟ್ಯರು.

8. ,, ತರೀಕೆರೆ ಶ್ರೀನಿವಾಸರಾಯರು.

I. ಡಿಸ್ಟ್ರಿಕ್ಟ್ ಬೋರ್ಡಿನ ನಡವಳಿಕೆಗಳನ್ನು ಯಾವ ಭಾಷೆಯಲ್ಲಿ ಬರೆದಿಡತಕ್ಕದ್ದೆಂದು ಪ್ರಸ್ತಾಪ ಬಂದದ್ದರ ಮೇಲೆ ಸದರಿ ನಡವಳಿಕೆಗಳನ್ನು ಇಂಗ್ಲೀಷಿನಲ್ಲಿ ಬರೆದು ಅದರ ಕನ್ನಡ ತರ್ಜುಮೆ ನಕಲುಗಳನ್ನು ಇಂಗ್ಲೀಷು ತಿಳಿಯದೆ ಇರತಕ್ಕ ಮೆಂಬರುಗಳಿಗೆ ಮಾತ್ರ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

II. ಮೂರನೇ ಕ್ಲಾಸ್ ಟ್ರಾವೆಲರ್ಸ್ ಬಂಗಲೆಗಳ ಸಾಮಾನ್ಯ ರಿಪೇರಿಗಳು ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ನಡಿಯುವದಕ್ಕೆ ಬದಲಾಗಿ ರೆವಿನ್ಯೂ ಇಲಾಖೆಯಿಂದ ನಡಿಯತಕ್ಕ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ತೀರ್ಮಾನ ಮತ್ತು ಪ್ರೆಸಿಡೆಂಟರವರ ಅಭಿಪ್ರಾಯ ಅವಶ್ಯಕವೆಂಬುದೂ, ಹಾಗಬುದಾ ಈ ಕೌಶಲ್ಯವು ಅವಶ್ಯಕವಿರುವ ಕೆಲಸಗಳನ್ನು ಮಾತ್ರ ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಮಾಡಲ್ಪಡಬಹುದೆಂಬುದೂ, ಸೀ' ಮಾಡೋಣವರಿಂದ ಈಗ ರೆವಿನ್ಯೂ ಇಲಾಖೆ ಮೂರೀಫತ್ತು ನಡಿಯುವ ಕೆಲಸಗಳ ಸೂಕ್ಷ್ಮವಿಚಾರಣೆಗಾಗಿ ನೇಮಕ ಮಾಡಲ್ಪಟ್ಟವರಿಂದ ವರ್ಕ್ ಇನ್ಸ್ಪೆಕ್ಟರುಗಳಿಗೆ ಕೊಡತಕ್ಕ ತಲಬಿನ ಉದ್ದಿಶ್ಯ ಉಂಟಾಗತಕ್ಕ ಹೆಚ್ಚಿಗೆ ಖರ್ಚಿನ ಕಮ್ಮಿಯಾಗುವೆತ್ತೆಂತ ತಲಪಿರುವ ತಾ 9—2—1904ನೆ ನಮ್ಬರ್ 2024-32—L. F. 42-92ನೆ ನಂಬಿಕು ಗವರ್ನಮೆಂಟ್ ಆರ್ಡರನ್ನು ಓದಲಾಯಿತು.

ಮೂರನೇ ಕ್ಲಾಸ್ ಟ್ರಾವೆಲರ್ಸ್ ಬಂಗ್ಲೆಗಳ ರಿಪೇರಿಯು ಈಗಿನಂತೆಯೇ ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಮಾಡತಕ್ಕ ಪದ್ಧತಿಯೇ ಮುಂದೂ ಜಾರೀಲಿ ಇರತಕ್ಕದ್ದು. ಚಿಕ್ಕಮಗಳೂರು, ಕೊಪ್ಪ, ಮೂಡಿಗೆರೆ ಮತ್ತು ಯಡೆಹಳ್ಳಿ ಸಬ್ ತಾಲ್ಲೂಕುಗಳಲ್ಲಿ ವರ್ಕ್ ಇನ್ಸ್ಪೆಕ್ಟರುಗಳು ಇರುವದಿಲ್ಲವಾ. ತರೀಕೆರೆ ಮತ್ತು ಕಡೂರು ತಾಲ್ಲೂಕುಗಳಲ್ಲಿರುವ ವರ್ಕ್ ಇನ್ಸ್ಪೆಕ್ಟರುಗಳ ಸಂಬಳಿಕ್ಕೆ ಆ ತಾಲ್ಲೂಕುಗಳಲ್ಲಿ ನಡಿಯತಕ್ಕ ಪ್ಯೂನಿಸಿಂಗ್ ಕೆಲಸಗಳು ರೆವಿನ್ಯೂ ಇಲಾಖೆ ಮೂರೀಫತ್ತು ನಡಿಯತಕ್ಕ ಡಿಸ್ಟ್ರಿಕ್ಟ್ ಫಂಡ್ ಕೆಲಸಗಳೂ ಸಹ ತಕ್ಕಷ್ಟು ಖರ್ಚನ್ನು ಉಂಟುಮಾಡಲು ಸಾಕಾಗುತ್ತೆಂತ ತೀರ್ಮಾನಿಸಲಾಯಿತು.

1057

III. ಬೀರೂರು-ದೇವನಕೆರೆ-ಕೋಡಿಹಳ್ಳದ ಕಾಲುವೆಗಳ ಮೇಲೆ ಸೇತುವೆಗಳನ್ನು ಕಟ್ಟುವದಕ್ಕೆ ವಿಚಾರದಲ್ಲಿ ಕಡೂರು ತಾಲ್ಲೂಕು ಅಮಲ್ದಾರ್ರವರಿಂದ ತಲಪಿದ 960 ರೂಪಾಯಿನ ಅಂದಾಜಾವನ್ನು ತನಿಖೆ ಬಗ್ಗೆ ಕಡೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಗೆ ಈ ಆಫೀಸಿನಿಂದ 27—10—1903ನೆ ಮಾರ್ಕ್ಕಂ ನಂಬರು 105ನೆ ಡಾಕೆಟ್ ನಂಗಡ ಕಳಿಸಿ ಇದ್ದದ್ದಕ್ಕೆ ಜವಾಬಾಗಿ ಸದರಿ ಕಾಮಗಾರಿಗಳು ನಡಿಯಬೇಕಾದ ಸ್ಥಳ ಅಜಮಾಯಿಷಿ ಮಾಽರುತ್ತೇವೆಂತಲೂ, ಈಗ ಇರತಕ್ಕ 3 ಕಂಣಿನ ಮೊರಿ ರಿಪೇರಿ ಆಗಬೇಕೆಂತಲೂ, ಸ್ಕೆಚ್ ಪ್ಲಾನ್ನಲ್ಲಿ ವಿವರಿಸಿರುವ ಮೇರೆ ಮೊರಿ ಪಕ್ಕದಲ್ಲಿ ಮಣ್ಣು ಕಾಮಗಾರಿ ನಡಿಯುಬೇಕಾದ್ದು ಅವಶ್ಯಕವೆಂತಲೂ, ಸದರಿ ಕೆಲಸಕ್ಕೆ ಲಗತ್ತಿರುವ ಅಂಪಾಜಾದಂತೆ 204 ರೂಪಾಯಿಗಳು ಖರ್ಚಾಗಬಹುದೆಂತಲು ಸಹಾ ಅಭಿಪ್ರಾಯಪಟ್ಟು ಬರೆದಿರುವ 19—4—1904ನೆ ಮಾರ್ಕ್ಕಂ ನಂಬರು 83ನೆ ಡಾಕೆಟನ್ನ ಓದಲಾಯಿತು.

ಸದರಿ 204 ರೂಪಾಯಿಗಳ ಅಂದಾಜು ವಂಜೂರು ಮಾಡಬೇಕೆಂತಲೂ, ಕೆಲಸವನ್ನು ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಪೂರೈಸಬೇಕಾಗಿ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಗೆ ಬರಿಯಬೇಕೆಂತಲೂ ಸಹ ತೀರ್ಮಾನಿಸಲಾಯಿತು.

IV. ವಿಲೇಜ್ ಯೂನಿರ್ಯಾಗಳಲ್ಲಿ ಮನೆ ಕಂದಾಯ ಹಾಕುವದಕ್ಕೋಸ್ಕರ ಮನೆಗಳನ್ನು ಕ್ಲಾಸ್‌ವಾರು ವಿಂಗಡಿಸಲು ಒಂದು ಸ್ಕೇಲನ್ನು ಮಾಡಿಸಿ ಅದರ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯ ತಿಳಿಸಬೇಕೆಂತ ಗವರ್ನ್‌ಮೆಂಟಿನಿಂದ ತಲ್ಪಿದ 8—4—1904ನೆ ಮಾರ್ಕ್ಕಂ 3878-85—L. F. 109—03ನೆ ನಂಬರು ಆರ್ಡರನ್ನು ಓದಲಾಯಿತು.

(a) ಗವರ್ನ್‌ಮೆಂಟಿನವರು ಅಲೋಚಿಸಿ ಕ್ಲಾಸುವಾರು ವಿಂಗಡಿಸಿರುವದು ಸರಿಯಾಗಿರುತ್ತೆಂತಲೂ, ಈ ಕೆಳಗೆ ನಮೂದಿಸಿರುವಮೇರ್ಗೆ ಇನ್ನು ಬಂದು ಕ್ಲಾಸು ವಿಂತ್ಯ ಕೀದಿಸಿಕೊಂಡು ಗವರ್ನ್‌ಮೆಂಟಿನವರು ಮಾಡಿರುವ ಸ್ಕೇಲು ಮೇರೆ ಅನುಸರಿಸಬಹುದೆಂತ ಸಹ ಬೋರ್ಡಿನಲ್ಲಿ ತೀರ್ಮಾನಿಸಲಾಯಿತು.

	ರೂ.	ಆ.	ಪೈ.
1ನೆ ಕ್ಲಾಸ್ 750 ರೂಪಾಯಿಗಳಿಗಿಂತ ಹೆಚ್ಚು ಕೀದಿ ಬಾಳತಕ್ಕ ಮನೆಗಳು ...	5	0	0
2ನೆ ಕ್ಲಾಸ್ 500 ರೂಪಾಯಿ ಆಗಾಯಿತು 750 ರೂಪಾಯಿಗಳ ವರಿಗಿನ ಖರೀದಿ ಬಾಳತಕ್ಕ ಮನೆಗಳು ...	4	0	0
3ನೆ ಕ್ಲಾಸ್ 250 ರೂಪಾಯಿಗಳ ಆಗಾಯಿತು 500 ರೂಪಾಯಿಗಳ ವರಿಗಿನ ಖರೀದಿ ಬಾಳತಕ್ಕ ಮನೆಗಳು ..	3	0	0
4ನೆ ಕ್ಲಾಸ್ 100 ರೂಪಾಯಿಗಳ ಆಗಾಯಿತು 250 ರೂಪಾಯಿಗಳ ವರಿಗಿನ ಖರೀದಿ ಬಾಳತಕ್ಕ ಮನೆಗಳು ..	2	0	0
5ನೆ ಕ್ಲಾಸ್ 50 ರೂಪಾಯಿಗಳ ಆಗಾಯಿತು 100 ರೂಪಾಯಿಗಳ ವರಿಗಿನ ಖರೀದಿ ಬಾಳತಕ್ಕ ಮನೆಗಳು...	1	0	0
6ನೆ ಕ್ಲಾಸ್ 25 ರೂಪಾಯಿಗಳ ಆಗಾಯಿತು 50 ರೂಪಾಯಿಗಳ ವರಿಗಿನ ಖರೀದಿ ಬಾಳತಕ್ಕ ಮನೆಗಳು ..	0	8	0
7ನೆ ಕ್ಲಾಸ್ 25 ರೂಪಾಯಿಗಳಿಗಿಂತ ಕಮ್ಮಿ ಖರೀದಿ ಬಾಳತಕ್ಕ ಮನೆಗಳು ...	0	4	0

(b) 5 ರೂಪಾಯಿಗಳಿಗಿಂತ ಕಮ್ಮಿ ಖರೀದಿ ಬಾಳತಕ್ಕ ಮನೆಗಳನ್ನು ತೆರಿಗೆಯಿಂದ ವಿನಾಯಿಸಬೇಕೆಂತ ಮೆ॥ ಮಾಗಳದ ರಾಮಚಂದ್ರರಾಯರವರು ಪ್ರಸ್ತಾಪ ಮಾಡಿದ್ದಕ್ಕೆ ಬೋರ್ಡಿನವರ (Votes) ಸಮ್ಮತಿಗಳನ್ನ ತೆಗಿಯಲಾಗಿ ವಿರೋಧಪಕ್ಷವಾಗಿ 14, ಇವರೆ ಪಕ್ಷವಾಗಿ 1, ಈರೀತಿ ಸಮ್ಮತಿಗಳು ಜಂದದ್ದರಿಂದ ಈ ಪ್ರಸ್ತಾಪವನ್ನು ತಿರಸ್ಕರಿಸಲಾಯಿತು.

V. ಸನ್ 1904ನೆ ಇಸವಿ ಏಪ್ರೆಲ್ ತಾರೀಖು 12ದಲ್ಲು ನಡದ ಡಿಸ್ಟ್ರಿಕ್ಟ್ ಬೋರ್ಡಿನ VIIIನೆ ನಂಬರು ತೀರ್ಮಾನದ ವಿಷಯವಾದ ಚೀಕನಹಳ್ಳಿ-ಚಿಕ್ಕಮಗಳೂರು ರಸ್ತೆಯ ಟೈಸಿಂಗ್ ಪ್ಲಾನನ್ನು ಆ ರಸ್ತೆ ಆಗುವದರಲ್ಲಿ ಆಸಕ್ತರಾಗಿರುವ ಪ್ಲಾಂಟರುಗಳ ಅಲೋಚನೆ ಬಗ್ಗೆ ಇಡುತ್ತೇನೆಂತ ಬಸಕಲ್ ಎಸ್ಟೇಟ್ ಮೆ॥ ಆರ್. ಡಬ್ಲ್ಯು. ಫೈವೀಲ್ಡ್ ಸಾಹೇಬರವರಿಂದ ಬಂದ 4—5—1904ನೆ ಮಾರ್ಕ್ಕಂ ಕಾಗದವನ್ನು ಓದಿ ರಿಕಾರ್ಡ್ ಮಾಡಲಾಯಿತು.

VI. ಡಿಸ್ಟ್ರಿಕ್ಟ್ ಬೋರ್ಡಿನವರು ಅಸಿಸ್ಟೆಂಟ್ ಕಮಿಷನರ್ ಮೆ॥ ಪಿ. ಜಿ. ಡಿಸೋಜಾಯವರನ್ನು ವೈಸ್ ಪ್ರೆಸಿಡೆಂಟರನ್ನಾಗಿ ಚುನಾಯಿಸಿರುವದನ್ನು ಹುಂಜೂರು ಮಾಡಿರುವದಾಗಿ ತಲ್ಪಿದ 7—5—1904ನೆ ಮಾರ್ಕ್ಕಂ 4250—L. F. 82—03ನೆ ನಂಬರು ಗವರ್ನ್‌ಮೆಂಟ್ ನೋಟಿಫಿಕೇಷನ್ನನ್ನ ಓದಿ ರಿಕಾರ್ಡ್ ಮಾಡಲಾಯಿತು.

VII. ಹೊರನಾಡು ಕಾಫಿತೋಟದಲ್ಲಿ ಬಂದು ದೊಡ್ಡಿ ಸ್ಥಾಪಿಸುವದನ್ನು ಮಂಜೂರು ಮಾಡಬೇಕೆಂತಲೂ ಸದರಿ ತೋಟದ ಯಜಮಾನರಾದ ಮೆ॥ ರೇಗೊ ಸಾಹೇಬರವರು ಗ್ರಾಮಸ್ಥರಿಗೆ ಅನುಕೂಲವಾಗಿರುವಂತೆ ತಮ್ಮ ತೋಟದ ಬಂದು ಕಿನಾರೆಯಲ್ಲಿ ಬಂದು ದೊಡ್ಡಿ ಕಟ್ಟಡವನ್ನು ಕಟ್ಟಿರುತ್ತಾರೆಂತಲೂ, ಮಳೆಗಾಲದಲ್ಲಿ ಭದ್ರಾನದಿಯಲ್ಲಿ ಪ್ರವಾಹ ಬರೋದರಿಂದ 6 ಮೈಲಿ ಫಾಸಲೆಯಲ್ಲಿ ಇರುವ ಕಳಸದ ದೊಡ್ಡಿಗೆ ಜಾನುವಾರುಗಳನ್ನು ಅಟ್ಟಿಕೊಂಡು ಹೋಗುವದು ಅಸಾಧ್ಯವೆಂತಲೂ, ಮೂಡಿಗೆರೆ ತಾಲ್ಲೂಕು ಅಮಲ್ದಾರ್ರವರಿಂದ ತಲ್ಪಿರುವ 27—4—1904ನೆ ಮಾರ್ಕ್ಕಂ 242ನೆ ರಿಪೋರ್ಟನ್ನ ಓದಲಾಗಿ ಹೊರನಾಡು ಎಸ್ಟೇಟಿನಲ್ಲಿ ಒಂದು ದೊಡ್ಡಿ ಸ್ಥಾಪಿಸುವದು ಅನಾವಶ್ಯಕವಂತ ಡಿಸ್ಟ್ರಿಕ್ಟ್ ಬೋರ್ಡಿನವರು ಎಣಿಸಿರುತ್ತಾರೆ.

VIII. ಜಾಲ್ತಿ ಸಾಲ ರಿಪೋರ್ಟನ್ನು ವಿಧಾಯುಕ್ತವಾಗಿ ನಮೂನೆಪಾಲ್ಲಿ ವರಿಷ್ಠ್ಯಗಳ ಸಮೇತವಾಗಿ ತಯಾರ್ಮಾಡಿ ಸಪ್ಟಂಬರು 30 ಯಾ ಅದರಳಗೆ ಗವರ್ನ್‌ಮೆಂಟ್ ಸೆಕ್ರಟೆರಿಯಟ್ ಆಫೀಸಿಗೆ ತಲಪುವಂತೆ ಕಳಿಸಿಕೊಡಲಿಕಾಗಿ ತಲ್ಪಿದ 5—8—1904ನೆ ಮಾರ್ಕ್ಕಂ 3366-75—L. F. 105—03ನೆ ನಂಬರು ಆರ್ಡರನ್ನ ಓದಿ ರಿಕಾರ್ಡ್ ಮಾಡಲಾಯಿತು.

IX. ಕೋಂದಿ ಅಂಗಡಿಗಳ ಗುತ್ತಾ ಪೊಬಲ್ಲಗಿನ್ನ ಮೇಲೆ ಪ್ರತ್ಯೇಕ ಲೋಕಲ್ ಸೆಸ್ಸು ವಸೂಲ್ಮಾಡುವದನ್ನು ಮಂಜೂರ್ಮಾಡಿರುತ್ತೆಂತ ವರ್ಷರ ಗವರ್ನ್‌ಮೆಂಟಿನಿಂದ ತಲ್ಪಿರುವ 7—4—1904ನೆ ಮಾರ್ಕ್ಕಂ 668-77—Ex. F. 6-02ನೆ ಆರ್ಡರನ್ನ ಓದಿ

ರಿಕಾರ್ಡ್ ಮಾಡಲಾಯಿತು. ಕೇಂದ ಅಂಗಡಿಗಳ ಗುತ್ತಾ ವೊಬಲಿಗಿನ ಮೇಲೆ ಹುಟ್ಟುವಳಿಯಾಗುವ ಲೋಕಲ್ ಸೆಸ್ಸು ಪೈ॥ ಕೇಕಡ 76 ಭಾಗದ ಪೊಬಲಿಗನ್ನು ಡಿಸ್ಟ್ರಿಕ್ಟ್ ಫಂಡಿಗೆ ಕೊಡುವ ಬಗ್ಗೆ ಗವರ್ನ್‌ಮೆಂಟಿನವರನ್ನು ಕೇಳಿಕೊಳ್ಳಬೇಕಾಗಿ ಸಹ ತೀರ್ಮಾನಿಸಲಾಯಿತು.

X. ಚಿಕ್ಕಮಗಳೂರು ತಾಲ್ಲೂಕು ರೋಲ್ಡ್ 10 - 5—1904ನೆ ಮಾರ್ಚಿಂ ಬಾಬತು ಈ ಕೆಳಗೆ ಕಂಡ ತೀರ್ಮಾನಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಓದಲಾಯಿತು.

1. ಪನ್ಯಾರೆಯಲ್ಲಿ ಪ್ರತಿ ಮಂಗಳವಾರವು ಸಂತೆ ನೆರೆಯುವ ಬಗ್ಗೆ ಅರ್ಜಿದಾರರು ಅಪೇಕ್ಷಿಸಿ ಕೇಳಿಕೊಂಡ ವಿಚಾರದಲ್ಲಿ ಸಂತೆ ನಡಿಯಲು ಅಭ್ಯಂತರವಿಲ್ಲವೆಂತಲೂ ಗವರ್ನ್‌ಮೆಂಟ್ ಮಂಜೂರಾತಿ ಪಡಿಯಬೇಕೆಂತಲೂ.

2. ಹೊಸಹಳ್ಳಿ ಜೋಳದಹಾಳ್ 2 ಮೈಲಿ 3 ಫರ್‌ಲಾಂಗಿ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರ ಆಡಳಿತಕ್ಕೆ ತೆಗದುಕೊಳ್ಳಬೇಕೆಂಬ ವಿಚಾರದಲ್ಲಿ ಸದರಿ ರಸ್ತೆಯನ್ನು ಸಾಲಾಬಾರು ರೂಪಾ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡಿನವರು ಮೈಲಿ ಒಂದರ 30 ರೂಪಾಯಿ ಮೇರಿಗೆ ತೆಗದುಕೊಳ್ಳಬಹುದೆಂತಲೂ ರಸ್ತೆ ಅಭಿವೃದ್ಧಿ ಬಗ್ಗೆ ಸುತ್ತಮುತ್ತಾ ಇರತಕ್ಕ ರೈತರುಗಳು ಏನು ಚಂದಾ ಕೊಡುತ್ತಾರೆಂಬ ವದನ್ನು ಅಮಲ್ದಾರ್‌ರವರು ತಿಳಿದುಬೇಕೆಂತಲೂ.

3. ಬದಸ್ತೂರ್ ಉಪ್ಪಳ್ಳಿ, ಹಿರೇಕೊಳಲೆ ಮತ್ತು ಬಾಬಾಬುಡನ್ ಹಿಲ್ ರಸ್ತೆ ಇವೆರಡನ್ನು ಕೂಡುವಾಗ ಮೆ॥ ಮೂಗಳ ರಾಮಚಂದ್ರರಾಯರವರು ಮಾಡಿಸಿರುವ ಎರಡು ಮೈಲಿ ಹೊಸ ರಸ್ತೆಯನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಸಾಲಾಬಾದ್ ರೂ॥ ಬಗ್ಗೆ ಮೈಲಿ ಒಂದರ 30 ರೂಪಾಯಿ ಮೇರಿಗೆ ತೆಗದುಕೊಳ್ಳಬಹುದೆಂತಲೂ, ಮತ್ತು.

4. ಸಧ್ಯಕ್ಕೆ ಮಲೆನಾಡು ಪ್ರಾಂತ್ಯಕ್ಕೆ ಮಧ್ಯದಲ್ಲಿರುವ ಆಲೂರಿನಲ್ಲಿಯು, ಮೈದಾನು ಮಧ್ಯ ಪ್ರಾಂತದಲ್ಲಿರುವ ಕಳಸಾಪುರದಲ್ಲಿಯೂ, ಎಡು ಯೂನಿಯರ್ ಏರ್ಪಾಡಾಗಬಹುದೆಂತ ತಲ್ಪಿರ ತೀರ್ಮಾನವನ್ನು ರಿಕಾರ್ಡ್ ಮಾಡಿಕೊಂಡದ್ದಲ್ಲದೆ ಇತರ ತಾಲ್ಲೂಕು ಬೋರ್ಡ್‌ಗಳ ಈ ವಿಷಯದ ಪ್ರಸ್ತಾಪಗಳನ್ನು ತರಿಸಿ ಪಟ್ಟುಮಾಡಿ ಮನೆ ಮತ್ತು ಕಂಪೌಂಡಿನ ಲಿಸ್ಟುಗಳ ಸಹಿತ ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ವಿಾಟಿಂಗಿನಲ್ಲಿ ಇಡಬೇಕೆಂತ ಸಹ ತೀರ್ಮಾನಿಸಲಾಯಿತು.

XI. ಬುಕ್ಕಾಂಬುಧಿ—ತಿವನೆ ರಸ್ತೆಗೆ ಸಾಲಾಬಾದ್ ರೂಪೇರಿಗಾಗಿ ಸಾಲೀಯಾನಾ ಮೈಲಿ ಒಂದರ 30 ರೂಪಾಯಿನಂತೆ ಕೊಡು ತಲಿದ್ದದ್ದನ್ನು 1904-05ನೆ ಸಾಲಿನಿಂದ ಮೈಲಿ ಒಂದರ 60 ರೂಪಾಯಿಗಳಿಗೆ ಹೆಚ್ಚಿಸಿರುವದಾಗಿ ಬಗ್ಗೆರೆ ತಲ್ಪಿರ 6—5—1904ನೆ ಮಾರ್ಚಿಂ 4223-4—L. F. 8-04ನೆ ನಂಬರು ಗವರ್ನ್‌ಮೆಂಟು ಆರ್ಡರ್‌ನ್ನು ಓದಿ ರಿಕಾರ್ಡ್ ಮಾಡಲಾಯಿತು.

XII. 12—4—04ನೆ ಮಾರ್ಚಿಂ ಡಿಸ್ಟ್ರಿಕ್ಟ್ ಬೋರ್ಡಿನ 10ನೆ ನಂಬರು ತೀರ್ಮಾನವನ್ನು ಅನುಸರಿಸಿ ತರೀಕೆರೆಯಲ್ಲಿ ಹಿಂದೂ ವೈದ್ಯಶಾಲೆಯನ್ನು ಇಡುವದಕ್ಕೋಸ್ಕರ ಆ ಮ್ಯೂನಿಸಿಪಲ್ ಬೋರ್ಡಿನವರು ಮಾಸಿಕವಾನಾ 25 ರೂಪಾಯಿಗಳ ಮೇರೆ ಕಂಟ್ರಿಬ್ಯೂಷನ್ ಕೊಡಲು ಒಪ್ಪಿರುತ್ತಾರೆಂತ 1ನೆ ಅಸಿಸ್ಟೆಂಟ್ ಕಮಿಷನರವರಿಂದ ಬಂದ 25—5—1904ನೆ ಮಾರ್ಚಿಂವಿನ 4:8ನೆ ಯಾದಿಯನ್ನು ಓದಲಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಈ ವೈದ್ಯಶಾಲೆಗೆ ತಿಂಗಳು 1ರ 10 ರೂಪಾಯಿ ಮೇರೆ ತಾಪ್ಲೂನು ವಂತಿಗೆ ಕೊಡುವದಾಗಿಯೂ ತರೀಕೆರೆಯಲ್ಲಿ ವೈದ್ಯಶಾಲೆ ಸ್ಥಾಪಿಸುವ ಬಗ್ಗೆ ಗವರ್ನ್‌ಮೆಂಟು ಮಂಜೂರಾತಿ ಪಡಿಯಬೇಕಾಗಿ ಸಹ ತೀರ್ಮಾನಿಸಲಾಯಿತು.

XIII. ಸ॥1904—05ನೆ ಸಾಲಿನ ಬಡ್ಜೆಟ್ ಅಂದಾಜುಗಳನ್ನು ಮಂಜೂರ್ಮಾಡಿರುತ್ತೆಂತ ಬಗ್ಗೆರೆ ಗವರ್ನ್‌ಮೆಂಟಿನಿಂದ ತಲ್ಪಿರ 20—5—1904ನೆ ಮಾರ್ಚಿಂ 4516-28—L. F. 8-04ನೆ ನಂಬರು ಆರ್ಡರನ್ನು ಓದಿ ರಿಕಾರ್ಡ್ ಮಾಡಲಾಯಿತು.

XIV. ಮುಂದಿನ ವಿಾಟಿಂಗ್ 1904ನೆ ಇಸವಿ ಸೆಪ್ಟಂಬರು 5ನೆ ಸೋಮವಾರ ನಡಿಯಬೇಕೆಂತ ತೀರ್ಮಾನಿಸಲಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ॥ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 362.

ಶಿವಮೊಗ್ಗಾದಲ್ಲಿ ವಾಸವಾಗಿರು, ವ್ಯತಪಟ್ಟ ಕುಸಕೂರು ಪಾಂಡುರಂಗಪ್ಪನವರ ಆಸ್ತೀ ವಿಷಯದಲ್ಲಿ —

ಅರ್ಜೀದಾರು) ಘನತಿ ಪಾಂಡುರಂಗಪ್ಪನ ಮಗ 1ನ ವಿತಲಪ್ಪ, 2ನೆ ರಂಗಪ್ಪ, 3ನೆ ಮೈ॥ಗಾ॥ ತಾಯಿ ಶೇಷಮ್ಮ, ವ್ಯತಪಟ್ಟ ಸದರೀ ಪಾಂಡುರಂಗಪ್ಪನವರಿಗೆ 1—2ನೆ ಅರ್ಜೀದಾರ್ ಮಕ್ಕಳು ಮತ್ತು 3ನೆ ಮೈ॥ಗಾ॥ ಹೆಂಡತಿ ಆಗಬೇಕೆಂಬ ಹಕ್ಕುದಾರ ಮೇಲೆ ಶಿವಮೊಗ್ಗಾ ಸ್ಥಳದ 1ನೆ ವಿತಲಪ್ಪ, 2ನೆ ರಂಗಪ್ಪ, 3ನೆ ಮೈ॥ಗಾ॥ ಶೇಷಮ್ಮ, ಶಿವಮೊಗ್ಗಾ ವಾಸಸ್ಥರಾಗಿ ವ್ಯತಪಟ್ಟ ಪಾಂಡು-ರಂಗಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ॥1901ನೆ ಇಸವಿ VIIನೆ ನಂಬರ್ ರಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರಿ ದರಖಾಸ್ತುದಾರರಾದ 1—2—3ನೆ ಅರ್ಜೀದಾರ್ರು ಅರ್ಜಿಯನ್ನು ಸ॥ 1904ನೆ ಇಸವಿ ಜುಲ್ಯೆ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವೇಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ಪಾಂಡು ರಂಗಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1904ನೆ ಇಸವಿ ಜೂ॥ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರುನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.